# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 22-08-2016ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಎಮ್. ಶಿವರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ವಿ.ವಿ.ಪಾರ್ತಿಬರಾಜನ್ – ಸದಸ್ಯರು | ಮುಖ್ಯಲೆಕ್ಕಾಧಿಕಾರಿ, ಮುಖ್ಯ ಆರ್ಥಿಕ ಅಧಿಕಾರಿ, |
| ಆರ್.ಪದ್ಮಾವತಿ ಅಮರ್‌ನಾಥ್ – ಸದಸ್ಯರು | ಉಪ ನಿರ್ದೇಶಕರು (ತೋಟಗಾರಿಕೆ), |
| ಲಲಿತ ತಿಮ್ಮನಂಜಯ್ಯ.ಕೆ.ಎಲ್.ಆರ್ – ಸದಸ್ಯರು | ಉಪ ಕಾನೂನು ಅಧಿಕಾರಿ |
| ನೇತ್ರಾ ನಾರಾಯಣ್ – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು, |
| ಉಮೇಸಲ್ಮ – ಸದಸ್ಯರು | -- |
| ಎ. ಕೋದಂಡರೆಡ್ಡಿ – ಸದಸ್ಯರು | -- |
| ಕೆ. ಪೂರ್ಣಿಮ – ಸದಸ್ಯರು | -- |
| ಕುಸುಮ. ಹೆಚ್ – ಸದಸ್ಯರು | -- |
| ಕೆ.ವಿ. ರಾಜೇಂದ್ರಕುಮಾರ್ – ಸದಸ್ಯರು | -- |
| ಅರುಣ ರವಿ – ಸದಸ್ಯರು | -- |

***(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)***

***01]. ವಿಷಯದ ಸಂಖ್ಯೆ: ತೆಆಸ್ಥಾಸ/04/2016-17***

ಆಯುಕ್ತರ ಟಿಪ್ಪಣಿ ದಿನಾಂಕ: 02.04.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಸಭೆಯಲ್ಲಿ ತೆಗೆದುಕೊಂಡಿರುವ ವಿಷಯ ಸಂಖ್ಯೆ: ತೋಸ್ಥಾಸ/21/2015-16, ದಿನಾಂಕ: 08.01.2016ರ ನಿರ್ಣಯದಲ್ಲಿ, ದಿನಾಂಕ: 01.12.2015 ರಿಂದ 31.05.2016ರವರೆಗೆ ಉದ್ಯಾನವನಗಳ ನಿರ್ವಹಣೆಯನ್ನು ಹಾಲಿ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಿಂದಲೇ ಮುಂದುವರೆಸುವಂತೆ ಸಮಿತಿಯು ತೀರ್ಮಾನಿಸಿ ಹಾಗೂ 2015-16ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0088 ರಲ್ಲಿರುವ ರೂ.3,000.00 ಲಕ್ಷಗಳ ಅನುದಾನವನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಿಗೆ ಸಂಬಂಧಪಟ್ಟ ಬಾಕಿಯಿರುವ ಡಿ.ಸಿ.ಬಿಲ್ಲುಗಳನ್ನು ಹಂತಹಂತವಾಗಿ ಪಾಲಿಕೆಯ ನಿಯಮಾನುಸಾರ ಹಣ ಬಿಡುಗಡೆ ಮಾಡಿ, ಮರು ಹೊಂದಾಣಿಕೆ ಮಾಡಿಕೊಂಡಿರುವ ಸದರಿ ರೂ.3,000.00 ಲಕ್ಷಗಳ ಅನುದಾನವನ್ನು 2016-17ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಗಳ ಅನುದಾನದ ಅಡಿಯಲ್ಲಿ ಕಾದಿರಿಸಿಕೊಳ್ಳುವಂತೆ ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

ಮುಂದುವರೆದಂತೆ, ಲೆಕ್ಕಶೀರ್ಷಿಕೆ ಪಿ-0088 ಅಡಿಯಲ್ಲಿ ಕೈಗೊಂಡ ಉದ್ಯಾನವನಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಬಾಕಿ ಬಿಲ್ಲುಗಳನ್ನು ಪಾವತಿಸಲು 2015-16ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-0088 ಅಡಿ ಲಭ್ಯವಿರುವ ರೂ.30.00 ಕೋಟಿ ಅನುದಾನದಲ್ಲಿ ರೂ. 14.00 ಕೋಟಿಗಳನ್ನು ಮರುಹೊಂದಾಣಿಕೆ ಮಾಡುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ: **2015-16ನೇ ಸಾಲಿಗೆ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-0088 ಉದ್ಯಾನವನಗಳ ಅಭಿವೃದ್ಧಿ & ನಿರ್ವಹಣೆಯ ಅಡಿ ಮೀಸಲಿಟ್ಟಿರುವ ರೂ.30.00 ಕೋಟಿ ಅನುದಾನದಲ್ಲಿ ರೂ.14.00 ಕೋಟಿಗಳನ್ನು ಮರುಹೊಂದಾಣಿಕೆ**

**ಸಲ್ಲಿಸಿರುವ ಟಿಪ್ಪಣಿಯಲ್ಲಿ 2016-17ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಗಳ ಶೀರ್ಷಿಕೆಯಡಿಯಲ್ಲಿ ಯಾವುದೇ ಹಣವನ್ನು ಮೀಸಲಿರಿಸಿರುವುದಿಲ್ಲ. ಪ್ರಸಕ್ತ ಸಾಲಿನ ನಿರ್ವಹಣೆ ಮಾತ್ರ ಹಣ ಮೀಲಿರಿಸಿದ್ದು, ಉದ್ಯಾನವನಗಳ ನಿರ್ವಹಣೆಗಳ ಹಿತದೃಷ್ಟಿಯಿಂದ ಹಿಂದಿನ ಸಾಲಿನ ಮೊತ್ತಕ್ಕೆ ಮರುಹೊಂದಾಣಿಕೆ ಮಾಡಲು ಸಾಧ್ಯವಿರುವುದಿಲ್ಲವೆಂದು ತಿಳಿಸುತ್ತಾ, ಆಯುಕ್ತರ ದಿನಾಂಕ: 02.04.2016ರ ಟಿಪ್ಪಣಿ ತಿರಸ್ಕರಿಸಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/36/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 14.07.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ನಂ 64 ರಾಜಮಹಲ್ ನಗರ ವ್ಯಾಪ್ತಿಯ ಪಾಲಿಕೆಯ ಆಸ್ತಿ ಸಂಖ್ಯೆ:99-88-11 ಎ ಡಿ ಬ್ಲಾಕ್ ನಲ್ಲಿ ಶ್ರೀ.ಮಾರಮ್ಮ ದೇವಸ್ಥಾನ ಸೇವಾ ಸಮಿತಿ (ರಿ) ಹಾಗೂ ಪಾಲಿಕೆಯೊಂದಿಗೆ ದಿನಾಂಕ: 28.12.2012ರಂದು ಒಟ್ಟು ಐದು ವರ್ಷಗಳಿಗೆ (ದಿ:27.11.2017) ರವರೆಗೆ ಭೋಗ್ಯಕ್ಕೆ ಒಪ್ಪಂದ ಮಾಡಿಕೊಂಡಿರಲಾಗಿರುತ್ತದೆ. ಸದರಿ ಜಾಗದಲ್ಲಿ ಈ ಹಿಂದಿನಿಂದಲೂ ಇರುವ ಶ್ರೀ.ಮಾರಮ್ಮ ದೇವಸ್ಥಾನದ ಕಟ್ಟಡವು ಶಿಥಿಲಗೊಂಡಿರುತ್ತದೆ. ಆದ ಕಾರಣ ದೇವಸ್ಥಾನದ ಹೊರಭಾಗದಲ್ಲಿರುವ ಪ್ಲಾಸ್ಟರಿಂಗನ್ನು ತೆರವುಗೊಳಿಸಿ, ಹೊಸದಾಗಿ ಪ್ಲಾಸ್ಟರಿಂಗ್ ಹಾಗೂ ಪೇಂಟಿಂಗ್ ಕೆಲಸವನ್ನು ನಿರ್ವಹಿಸಬೇಕಾಗಿರುತ್ತದೆ. ಇದರ ಹೊರತಾಗಿ ಕೆಲವು ನವೀಕರಣ ಕೆಲಸಗಳನ್ನು ಕೈಗೊಳ್ಳಬೇಕಾಗಿದ್ದು ಯಾವುದೇ ರೀತಿಯ ಶಾಶ್ವತ ಕಟ್ಟಡದ ಭಾಗಗಳನ್ನು ನಿರ್ಮಿಸುವುದಿಲ್ಲ ಎಂಬುದಾಗಿ ಶ್ರೀ.ಮಾರಮ್ಮ ದೇವಸ್ಥಾನದ ಸೇವಾ ಸಮಿತಿ ರವರು ಕೋರಿಕೊಂಡಿರುತ್ತಾರೆ. ಹಾಗೂ ತಾತ್ಕಾಲಿಕವಾಗಿ ಕೇವಲ ನವೀಕರಣ ಕೆಲಸಗಳನ್ನೂ ಸಹ ದೇವಸ್ಥಾನದ ಸಮಿತಿಯ ಖರ್ಚಿನಲ್ಲಿಯೇ ಕೈಗೊಳ್ಳಲಾಗುತ್ತದೆ ಎಂಬುದಾಗಿ ತಿಳಿಸಿರುತ್ತಾರೆ.

ಆದುದರಿಂದ ಶ್ರೀ.ಮಾರಮ್ಮ ದೇವಸ್ಥಾನದ ಸೇವಾ ಸಮಿತಿ ರವರು ಕೋರಿಕೊಂಡಿರುವ ನವೀಕರಣ ಕೆಲಸಗಳನ್ನು ಕೈಗೊಳ್ಳಲು ಅನುಮತಿ ನೀಡುವ ಬಗ್ಗೆ ಪಾಲಿಕೆಯ ಮಾನ್ಯ ಆರ್ಥಿಕ ಮತ್ತು ತೆರಿಗೆ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 14.07.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/40/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26-07-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಶಾಸಕರು ಬಸವನಗುಡಿ ವಿಧಾನಸಭಾ ಕ್ಷೇತ್ರ ಇವರ ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ "ವಾರ್ಡ್ ನಂ 162 ರಲ್ಲಿ ಬಿ.ಎಸ್.ಕೆ 3 ನೇ ಹಂತ 6ನೇ ಬ್ಲಾಕ್‌ನಲ್ಲಿ ಇರುವ ಪುಷ್ಪಾಂಜಲಿ ಪಾರ್ಕ್ ಒಳ ಮತ್ತು ಹೊರಬಾಗದಲ್ಲಿ ಅಭಿವೃದ್ಧಿಪಡಿಸುವುದು ಮತ್ತು ಬಿ.ಎಸ್.ಕೆ 3ನೇ ಹಂತದ 80 ಅಡಿ ರಸ್ತೆಯಲ್ಲಿ ಬರುವ ಪಾರ್ಕಿನ ಒಳ ಮತ್ತು ಹೊರಭಾಗದಲ್ಲಿ ಅಭಿವೃದ್ಧಿಪಡಿಸುವ" ಕಾಮಗಾರಿಯ ಅಂದಾಜು ಮೊತ್ತ ರೂ. 15.00 ಲಕ್ಷಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರು ಅಧಿಕೃತ ಜ್ಞಾಪನ ಸಂಖ್ಯೆ ಕೆ.ಎಲ್‌ಎಲ್‌ಎಡಿಎಸ್(ಆರ್.ಎಸ್) ಸಿ.ಆರ್ 09/2015-16 ದಿನಾಂಕ 5-04-2016 ರಲ್ಲಿ 19 ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳನ್ನು ಆಯವ್ಯಯದ ಲೆಕ್ಕಶೀರ್ಷಿಕೆ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ಅಡಿ ಪರಿಗಣಿಸಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು

(ಯೋಜನೆ-ದಕ್ಷಿಣ) ರವರು ಅನುದಾನದ ಮೊತ್ತ ರೂ. 23.00 ಲಕ್ಷಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರು ಚೆಕ್ ಸಂಖ್ಯೆ 474286/ ದಿನಾಂಕ 13-6-2016 ರಲ್ಲಿ ಅನುದಾನವನ್ನು ಬಿಡುಗಡೆಗೊಳಿಸಿರುತ್ತಾರೆ ಎಂದು ವರದಿಸಿರುತ್ತಾರೆ. 2016-17 ನೇ ಸಾಲಿನ ಆಯವ್ಯಯದಲ್ಲಿ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ರ ಚಾಲ್ತಿ ಕಾಮಗಾರಿಗಳು ಅಡಿ ರೂ. 2.00 ಲಕ್ಷಗಳನ್ನು ಮೀಸಲಿರಿಸಿದ್ದು, ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅಡಿ ಬಿಡುಗಡೆಯಾಗಿರುವ ಮೊತ್ತ ರೂ. 15.00 ಲಕ್ಷಗಳಿದ್ದು, ಲೆಕ್ಕಶೀರ್ಷಿಕೆ ಪಿ-0583 ಅಡಿ ರೂ. 2.00 ಲಕ್ಷಗಳನ್ನು ಮೀಸಲಿರಿಸಿರುವುದರಿಂದ ಜಾಬ್‌ಸಂಖ್ಯೆ ನೀಡಲು ಅನುದಾನದ ಕೊರತೆ ಇರುತ್ತದೆ. 2016-17ರ ಲೆಕ್ಕಶೀರ್ಷಿಕೆ ಪಿ-0583 ಅಡಿ ರೂ. 15.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 26.07.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/41/2016-17***

ವಿಶೇಷ ಆಯುಕ್ತರು ದಿನಾಂಕ: 26-7-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಶಾಸಕರು ಬಸವನಗುಡಿ ವಿಧಾನಸಭಾ ಕ್ಷೇತ್ರ ಇವರ ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ "ಬಸವನಗುಡಿ ಉಪ ವಿಭಾಗದ ವಾರ್ಡ್ 154, 155 ಮತ್ತು 156ರಲ್ಲಿ ಕೊಳವೆ ಬಾವಿಯನ್ನು ಕೊರೆದು ನೀರು ಸರಬರಾಜು ಮಾಡುವ" ಕಾಮಗಾರಿಯ ಅಂದಾಜು ಮೊತ್ತ ರೂ. 15.00 ಲಕ್ಷಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರು ಅಧಿಕೃತ ಜ್ಞಾಪನ ಸಂಖ್ಯೆ ಕೆ.ಎಲ್‌ಎಲ್‌ಎಡಿಎಸ್(ಆರ್.ಎಸ್) ಸಿ.ಆರ್/09/2015-16 ದಿನಾಂಕ 05-04-2016 ರಲ್ಲಿ 19 ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳನ್ನು ಆಯವ್ಯಯದ ಲೆಕ್ಕಶೀರ್ಷಿಕೆ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ಅಡಿ ಪರಿಗಣಿಸಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ರವರು ಅನುದಾನದ ಶೇ 50% ಮೊತ್ತ ರೂ. 12,61,821-00 ಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರು ಚೆಕ್ ಸಂಖ್ಯೆ 474287/ ದಿನಾಂಕ 13-6-2016 ರಲ್ಲಿ ಅನುದಾನವನ್ನು ಬಿಡುಗಡೆಗೊಳಿಸಿರುತ್ತಾರೆ ಎಂದು ವರದಿಸಿರುತ್ತಾರೆ. 2016-17 ನೇ ಸಾಲಿನ ಆಯವ್ಯಯದಲ್ಲಿ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ರ ಚಾಲ್ತಿ ಕಾಮಗಾರಿಗಳು ಅಡಿ ರೂ. 2.00 ಲಕ್ಷಗಳನ್ನು ಮೀಸಲಿರಿಸಿದ್ದು, ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅಡಿ ಬಿಡುಗಡೆಯಾಗಿರುವ ಮೊತ್ತ ರೂ. 15.00 ಲಕ್ಷಗಳಿದ್ದು, ಲೆಕ್ಕಶೀರ್ಷಿಕೆ ಪಿ-0583 ಅಡಿ ರೂ. 2.00 ಲಕ್ಷಗಳನ್ನು ಮೀಸಲಿರಿಸಿರುವುದರಿಂದ ಜಾಬ್‌ಸಂಖ್ಯೆ ನೀಡಲು ಅನುದಾನದ ಕೊರತೆ ಇರುತ್ತದೆ. 2016-17ರ ಲೆಕ್ಕಶೀರ್ಷಿಕೆ ಪಿ-0583 ಅಡಿ ರೂ. 15.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 26.07.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/42/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26-07-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ಶಾಸಕರು ಬಸವನಗುಡಿ ವಿಧಾನಸಭಾ ಕ್ಷೇತ್ರ ಇವರ ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ "ಬಸವನಗುಡಿ ಉಪ ವಿಭಾಗದ ವಾರ್ಡ್ 155, 156, 162, 163 & 164ರಲ್ಲಿ ಕೊಳವೆ ಬಾವಿಯನ್ನು ಕೊರೆದು ನೀರು ಸರಬರಾಜು ಮಾಡುವ" ಕಾಮಗಾರಿಯ ಅಂದಾಜು ಮೊತ್ತ ರೂ. 15.00 ಲಕ್ಷಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರು ಅಧಿಕೃತ ಜ್ಞಾಪನ ಸಂಖ್ಯೆ ಕೆ.ಎಲ್‌ಎಲ್‌ಎಡಿಎಸ್(ಆರ್.ಎಸ್) ಸಿ.ಆರ್/10/2015-16 ದಿನಾಂಕ 11-04-2016 ರಲ್ಲಿ 19 ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. ಕರ್ನಾಟಕ ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಕಾಮಗಾರಿಗಳನ್ನು ಆಯವ್ಯಯದ ಲೆಕ್ಕಶೀರ್ಷಿಕೆ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ಅಡಿ ಪರಿಗಣಿಸಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು (ಯೋಜನೆ-ದಕ್ಷಿಣ) ರವರು ಅನುದಾನದ ಶೇ 50% ಮೊತ್ತ ರೂ. 12,61,821-00 ಗಳನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ರವರು ಚೆಕ್ ಸಂಖ್ಯೆ 474287/ ದಿನಾಂಕ 13-6-2016 ರಲ್ಲಿ ಅನುದಾನವನ್ನು ಬಿಡುಗಡೆಗೊಳಿಸಿರುತ್ತಾರೆ ಎಂದು ವರದಿಸಿರುತ್ತಾರೆ. 2016-17 ನೇ ಸಾಲಿನ ಆಯವ್ಯಯದಲ್ಲಿ "ಶಾಸಕರ ಅನುದಾನದ ಕಾಮಗಾರಿಗಳು ಪಿ0583" ರ ಚಾಲ್ತಿ ಕಾಮಗಾರಿಗಳು ಅಡಿ ರೂ. 2.00 ಲಕ್ಷಗಳನ್ನು ಮೀಸಲಿರಿಸಿದ್ದು, ಸರ್ಕಾರದ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ಅಡಿ ಬಿಡುಗಡೆಯಾಗಿರುವ ಮೊತ್ತ ರೂ. 25.00 ಲಕ್ಷಗಳಿದ್ದು, ಲೆಕ್ಕಶೀರ್ಷಿಕೆ ಪಿ-0583 ಅಡಿ ರೂ. 2.00 ಲಕ್ಷಗಳನ್ನು ಮೀಸಲಿರಿಸಿರುವುದರಿಂದ ಜಾಬ್‌ಸಂಖ್ಯೆ ನೀಡಲು ಅನುದಾನದ ಕೊರತೆ ಇರುತ್ತದೆ. 2016-17ರ ಲೆಕ್ಕಶೀರ್ಷಿಕೆ ಪಿ-0583 ಅಡಿ ರೂ. 25.00 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 26.07.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/43/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 26-07-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, Shifting of Borewell at Konanakunte signal and UGD line at Doddakallasandra, Kanakapura main road in ward No 197 ಕಾಮಗಾರಿಯ ಅಂದಾಜು ಮೊತ್ತ ರೂ. 21.15 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಕಾರ್ಯಪಾಲಕ ಅಭಿಯಂತರರು (ಬೆಂಗಳೂರು- ದಕ್ಷಿಣ) ರವರು ಪ್ರಸ್ಥಾವನೆ ಸಲ್ಲಿಸಿ, ಕಾಮಗಾರಿ ಕೈಗೊಳ್ಳಲು BMRCL ರವರು ರೂ. 21.50 ಲಕ್ಷಗಳ ಮೊತ್ತವನ್ನು ಚೆಕ್‌ಸಂಖ್ಯೆ 691575/ದಿನಾಂಕ 04-12-2015 ರಲ್ಲಿ ಪಾಲಿಕೆಗೆ ಜಮಾ ಮಾಡಲಾಗಿದೆ ಎಂದು ವರದಿಸಿರುತ್ತಾರೆ. Deposit Contribution ಕಾಮಗಾರಿಯನ್ನು ಲೆಕ್ಕಶೀರ್ಷಿಕೆ ಪಿ-2348 Deposit Contribution Works ಅಡಿ ಪರಿಗಣಿಸಬಹುದಾಗಿದೆ. 2016-17 ನೇ ಸಾಲಿನ ಆಯವ್ಯಯದಲ್ಲಿ (ಪುಟ ಸಂಖ್ಯೆ 143) ಲೆಕ್ಕಶೀರ್ಷಿಕೆ ಪಿ-2348 ನ ಚಾಲ್ತಿ ಕಾಮಗಾರಿಗಳ ಅಡಿ ರೂ. 10.00 ಲಕ್ಷಗಳ ಅನುದಾನ ಮಾತ್ರ ಮೀಸಲಿರಿಸಿದ್ದು, ಪ್ರಸ್ತಾವನೆಯ ಮೊತ್ತ ರೂ. 21.15 ಲಕ್ಷಗಳಾಗಿದ್ದು, ಜಾಬ್‌ಸಂಖ್ಯೆ ನೀಡಲು ಅನುದಾನ ಕೊರತೆ ಇರುತ್ತದೆ. ಲೆಕ್ಕಶೀರ್ಷಿಕೆ ಪಿ-2348 ಅಡಿ ರೂ. 21.15 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಬೇಕಿದೆ. BMRCL ರವರು ರೂ. 21.50 ಲಕ್ಷಗಳ ಮೊತ್ತವನ್ನು ಪಾಲಿಕೆಗೆ ಜಮಾ ಮಾಡಿರುವುದರಿಂದ ರೂ. 21.15

ಲಕ್ಷಗಳ ಅನುದಾನವನ್ನು ಲೆಕ್ಕಶೀರ್ಷಿಕೆ ಪಿ–2348 ಅಡಿ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

***ವಿಷಯದ ಸಂಖ್ಯೆ: ತೆಆಸ್ಥಾಸ/45/2016–17***

ವಿಶೇಷ ಆಯುಕ್ತರು (ಆಸ್ತಿಗಳು) ರವರ ದಿನಾಂಕ: 05.07.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮಾನ್ಯ ವಿಶೇಷ ಆಯುಕ್ತರು (ಆಸ್ತಿಗಳು) ರವರು ದಿನಾಂಕ: 05–07–2016ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ನಂ(51)154ರ ಎನ್.ಆರ್.ಕಾಲೋನಿ, 3 ಮತ್ತು 4ನೇ ಮುಖ್ಯರಸ್ತೆ ನಡುವೆ ಇರುವ 30*118 ಚದರಡಿಗಳ 3540 ಅಡಿಗಳುಳ್ಳ ಪಾಲಿಕೆಯ ನಿವೇಶನವನ್ನು 1995 ರಲ್ಲಿ ಸರ್ಕಾರದ ಸಂಖ್ಯೆ:ವನಇ/104/ಎಂಎನ್‌ಜಿ/85, ದಿನಾಂಕ: 13–06–1994 ರಂತೆ 15 ವರ್ಷಗಳ ಅವಧಿಗೆ ಮಾಸಿಕ ರೂ.100/– ಗಳಂತೆ ಬಿ.ಎಂ.ಶ್ರೀ.ಸ್ಮಾರಕ ಪ್ರತಿಷ್ಠಾನ ಸಂಸ್ಥೆಗೆ ಗುತ್ತಿಗೆ ನೀಡಲಾಗಿದ್ದು, ಇದರ ಗುತ್ತಿಗೆ ಅವಧಿಯು ಜುಲೈ–2010ಕ್ಕೆ ಮುಕ್ತಾಯವಾಗಿದ್ದು, ಸದರಿ ಸಂಸ್ಥೆಯವರು ಮುಂದಿನ 99 ವರ್ಷಗಳ ಅವಧಿಗೆ ನವೀಕರಿಸಲು ಕೋರಿರುತ್ತಾರೆ.

ಕಂದಾಯ ಅಧಿಕಾರಿ (ದಕ್ಷಿಣ) ರವರು ಸ್ಥಳ ಪರಿಶೀಲಿಸಿ ಸದರಿ ಜಾಗದಲ್ಲಿ ಗುತ್ತಿಗೆದಾರರು 3 ಮಹಡಿಗಳ ಕಟ್ಟಡವನ್ನು ನಿರ್ಮಿಸಿರುತ್ತಾರೆ. ಅದರಲ್ಲಿ ಕನ್ನಡ ನಾಡಿನ ಅಮೂಲ್ಯ ಆಸ್ತಿಯಾದ ಕನ್ನಡ ಸಾಂಸ್ಕೃತಿಕ ಮಹತ್ವದ ಪ್ರಾಚೀನ ಓಲೆಗರಿ ಗ್ರಂಥಗಳ ಸಂಗ್ರಹಾಲಯ, ಗ್ರಂಥಾಲಯ ಮತ್ತು ಉಚಿತ ವಚನಾಲಯ ಇತ್ಯಾದಿಗಳಿದ್ದು, ಇಲ್ಲಿ ಕನ್ನಡ ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿದ್ದು, ಇದರಿಂದ, ಸಾರ್ವಜನಿಕರಿಗೆ ಹೆಚ್ಚು ಪ್ರಯೋಜನವಾಗುತ್ತಿರುತ್ತದೆ ಹಾಗೂ ಪಿ.ಹೆಚ್.ಡಿ ಮತ್ತು ಎಂಪಿಎಲ್ ನಂತಹ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನು ನೀಡುತ್ತಿರುತ್ತಾರೆ ಎಂಬುದಾಗಿ ವರದಿ ಮಾಡಿರುತ್ತಾರೆ ಹಾಗೂ ಸದರಿ ಗುತ್ತಿಗೆಯನ್ನು 15 ವರ್ಷಗಳ ಅವಧಿಗೆ ನವೀಕರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಈ ಬಗ್ಗೆ ದಿನಾಂಕ: 29–10–2010 ರಂದು ನಡೆದ ಪಾಲಿಕೆಯ ವಿಷಯ ಸಂಖ್ಯೆ:11 (125)2010–11 ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ: 12–10–2010ರ ನಿರ್ಣಯವನ್ನು ಒಪ್ಪಬಹುದೆಂದು ತೀರ್ಮಾಸಲಾಗಿರುತ್ತದೆ. ಸದರಿ ತೀರ್ಮಾನದಂತೆ ದಿನಾಂಕ: 02–08–2010 ರಂದು ಮಾನ್ಯ ಆಯುಕ್ತರು ಸದರಿ ಪ್ರಸ್ತಾವನೆಯನ್ನು ಮುಖ್ಯ ಕಾರ್ಯದರ್ಶಿಗಳು ರವರ ಅಧ್ಯಕ್ಷತೆಯಲ್ಲಿ ರಚಿಸಲಾದ ಸಲಹಾ ಸಮಿತಿಯಲ್ಲಿ ಸದರಿ ಪ್ರಕರಣವನ್ನು ಮಂಡಿಸಲು ಕೋರಿರುವ ಬಗ್ಗೆ ಅನುಮೋದಿಸಲಾಗಿರುತ್ತದೆ.

ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮಂಡಿಸಲಾಗಿದ್ದು, ಸದರಿ ಪ್ರಕರಣವು ಸಲಹಾ ಸಮಿತಿಯ ಮುಂದೆ ಮಂಡಿಸಿರುವುದಿಲ್ಲ. ದಿನಾಂಕ: 26–10–2010ರ ಸಲಹಾ ಸಮಿತಿಯ ನಿರ್ಣಯದಲ್ಲಿ ಗುತ್ತಿಗೆ ನವೀಕರಿಸುವಂತಹ ಪ್ರಕರಣಗಳು ಹಾಗೂ ಕೊಳಚೆ ಪ್ರದೇಶಗಳು ಇತ್ಯಾದಿಗಳಲ್ಲಿ ನೀಡುವಂತಹ ಹಕ್ಕುಪತ್ರಗಳ ಪ್ರಕರಣಗಳು ಈ ಸಮಿತಿಯಲ್ಲಿ ಚರ್ಚಿಸುವುದು ಸಮಂಜಸವಾಗಿರುವುದಿಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ.

ಗುತ್ತಿಗೆ ಅವಧಿ ನವೀಕರಣಕ್ಕೆ ಸಂಬಂಧಿಸಿದಂತೆ, ಸರ್ಕಾರದ ಪತ್ರ ಸಂಖ್ಯೆ:ನಅಇ 37 ಎಂಎನ್‌ಜಿ 2011 ದಿನಾಂಕ: 21–02–2011 ಮತ್ತು 22–03–2011 ರಂದು ಕೆಲವು ಅಂಶಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಕೋರಲಾಗಿದ್ದು, ಈ ಬಗ್ಗೆ ಪಾಲಿಕೆಯ ವತಿಯಿಂದ ಸ್ಪಷ್ಟೀಕರಣವನ್ನು ಒದಗಿಸಲಾಗಿರುತ್ತದೆ.

ನಂತರ, ಸರ್ಕಾರದ ಸಮ ಸಂಖ್ಯೆ ಪತ್ರದ ದಿನಾಂಕ: 27–05–2014 ರಲ್ಲಿ ಗುತ್ತಿಗೆ ನವೀಕರಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ತಿರಸ್ಕರಿಸಿ ದಿನಾಂಕ: 02–06–2003ರ ಸರ್ಕಾರದ ಆದೇಶದಲ್ಲಿನ

ಮಾರ್ಗಸೂಚಿ ಅನ್ವಯ ಕ್ರಮವಹಿಸುವಂತೆ ಹಾಗೂ ಇನ್ನು ಮುಂದೆ ಇಂತಹ ಎಲ್ಲಾ ಪ್ರಕರಣಗಳಲ್ಲಿ ಸದರಿ ಸರ್ಕಾರದ ಆದೇಶದಂತೆ ಪರಿಶೀಲಿಸಿ ಅಗತ್ಯವಿದ್ದಲ್ಲಿ ಮಾತ್ರ ಸ್ಪಷ್ಟ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಡುವಂತೆ ನಿರ್ದೇಶಿಸಿರುತ್ತಾರೆ.

ಅದರಂತೆ, ಸದರಿ ಕಡತವನ್ನು ಸರ್ಕಾರದ ಆದೇಶದಂತೆ ಕ್ರಮವಹಿಸಲು ವಲಯಾಧಿಕಾರಿಗಳಿಗೆ ಹಿಂತಿರುಗಿಸಲಾಗಿದ್ದು, ವಲಯಾಧಿಕಾರಿಗಳು ಕಂಡಿಕೆ (190) ರಿಂದ (197)ರ ವರೆಗೆ ಮಾಡಿರುವ ಶಿಫಾರಸ್ಸಿನಂತೆ ಸಂಸ್ಥೆಯವರು ಅನೇಕ ಸಾಂಸ್ಕೃತಿಕ ಕಾರ್ಯಕ್ರಮವುಳ್ಳ ಚಟುವಟಿಕೆಗಳನ್ನು ಸಾರ್ವಜನಿಕ ಉಪಯೋಗಕ್ಕಾಗಿ ಉಚಿತವಾಗಿ ನಡೆಸಿಕೊಂಡು ಬಂದಿರುತ್ತದೆ. ಅದರಲ್ಲಿ ಕೆಲವು ಉದಾಹರಣೆಗಳು ಅಂದರೆ, ಸಿರಿಕಂಠ, ವಿದ್ಯಾರ್ಥಿಗೋಷ್ಠಿ, ಹಸ್ತಪ್ರತಿ ತರಗತಿ ಮತ್ತು ಹಳೆಗನ್ನಡ ಶಿಬಿರಗಳು ವಿದ್ಯಾರ್ಥಿಗಳ ವೇದಿಕೆ 2002 ರಿಂದ ಅಸ್ಥಿತ್ವದಲ್ಲಿರುತ್ತದೆ. ಇದರಿಂದಾಗಿ ಹಳೆಗನ್ನಡ ಪ್ರಾಚೀನ ಸಾಹಿತ್ಯ ಮತ್ತು ವಿಶೇಷ ಜ್ಞಾನ ಮತ್ತು ಶಿಸ್ತುಗಳಲ್ಲಿ ಆಸಕ್ತಿ ಮೂಡಿಸಲು ಹಲವು ಸಾಹಿತ್ಯಾಸ್ತಕರು /ವಿದ್ಯಾರ್ಥಿಗಳನ್ನು ಸೆಳೆಯುತ್ತಿದೆ. ಪ್ರಾಚೀನ ಹಸ್ತಪ್ರತಿ ಕ್ಲಿನಿಕ್‌ನಲ್ಲಿ ತಾಳೆಗರಿ ಹಸ್ತಪ್ರತಿ ಸಂರಕ್ಷಿಸುವ ಬಗ್ಗೆ ವೈಜ್ಞಾನಿಕವಾಗಿ ಹಸ್ತಪ್ರತಿಯನ್ನು ಸಂರಕ್ಷಿಸಿಕೊಡಲಾಗುತ್ತಿದೆ ಹಾಗೂ ಉಚಿತ ವಾಚನಾಲಯವು ಸಾರ್ವಜನಿಕರ ಉಪಯೋಗಕ್ಕಾಗಿ ಬಳಸಲಾಗುತ್ತಿದೆ ಹಾಗೂ ಕನ್ನಡ ಭಾಷೆ ಸಂಶೋಧನೆಯನ್ನು ಪ್ರೋತ್ಸಾಹಿಸುವ ಅಪರೂಪದ ಸಂಸ್ಥೆಯಾಗಿದ್ದು, ಜುಲೈ-2010 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವ ಬಗ್ಗೆ ವರದಿಸಿರುತ್ತಾರೆ.

ಸಂಸ್ಥೆಯ ಗುತ್ತಿಗೆ ಅವಧಿಯು ಜುಲೈ-2010ಕ್ಕೆ ಮುಕ್ತಾಯವಾಗಿರುತ್ತದೆ. ವಲಯಾಧಿಕಾರಿಗಳ ವರದಿಯಂತೆ ಸಂಸ್ಥೆಯವರಿಗೆ ಗುತ್ತಿಗೆಯನ್ನು ನವೀಕರಿಸಬೇಕಾದಲ್ಲಿ ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002 ದಿನಾಂಕ: 02-06-2003ರ ಸುತ್ತೋಲೆಯಡಿ ವಿನಾಯಿತಿಯನ್ನು ನೀಡಿ ಗುತ್ತಿಗೆ ಮೊತ್ತ ನಿಗಧಿಪಡಿಸುವ ಬಗ್ಗೆ ಸಕ್ಷಮ ಪ್ರಾಧಿಕಾರವಾದ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮಂಡಿಸಬೇಕಾಗಿರುತ್ತದೆ.

2016ರ ಉಪ ನೊಂದಾಣಾಧಿಕಾರಿಗಳು ಮಾರ್ಗಸೂಚಿ ದರದಂತೆ ಎನ್.ಆರ್.ಕಾಲೋನಿ, 3ನೇ ಮುಖ್ಯರಸ್ತೆಯ ಬೆಲೆಯು ಒಂದು ಚದರಡಿಗೆ 6048/- ಗಳು ಶೇಕಡ 40% ರಷ್ಟು (ವಾಣಿಜ್ಯಕ್ಕೆ) ಸೇರಿ ಒಟ್ಟು ರೂ.8467/- ಗಳು ಅದರಂತೆ 8467x3540 ಅಡಿಗಳಿಗೆ ರೂ.2,99,73,180/- ಗಳಿಗೆ ಶೇಕಡ 10% ರಷ್ಟು ರೂ.29,97,318/- ವಾರ್ಷಿಕ ಮೊತ್ತವಾಗುತ್ತದೆ. ಇದರಲ್ಲಿ ಮಾಸಿಕ ಮೊತ್ತ ರೂ.2,49,776/- ಗಳು ಆಗುತ್ತದೆ.

ಸರ್ಕಾರದ ದಿನಾಂಕ: 02-06-2003 ರಲ್ಲಿನ ಸಾರ್ವಜನಿಕ ಬಹಿರಂಗ ಹರಾಜಿನಿಂದ ವಿನಾಯಿತಿ ನೀಡಿ ನವೀಕರಿಸುವ (ಅವಧಿ 30 ವರ್ಷ) ಬಗ್ಗೆ ಕಂಡಿಕೆ(207)ರಲ್ಲಿ ಮಾನ್ಯ ಆಯುಕ್ತರು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ವಿಷಯ ಕುರಿತಂತೆ ಸೂಕ್ತ ತೀರ್ಮಾನಕ್ಕಾಗಿ ಪಾಲಿಕೆಯ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬಿಬಿಎಂಪಿ ಸಭೆ ಮುಂದೆ ಮಂಡಿಸಿ ಘನ ಸರ್ಕಾರದ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ***"ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ-51 (154)ರಲ್ಲಿರುವ ಪಾಲಿಕೆ ಸ್ವತ್ತನ್ನು ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ರವರಿಗೆ ಗುತ್ತಿಗೆ ಅವಧಿಯನ್ನು 30 ವರ್ಷಗಳಿಗೆ ನವೀಕರಿಸುವ ಬಗ್ಗೆ ದಿನಾಂಕ:05-07-2016ರ ವಿಶೇಷ ಆಯುಕ್ತರು(ಆಸ್ತಿಗಳು) ರವರ ಟಿಪ್ಪಣೆಯಂತೆ ಸಮಿತಿ ಸಭೆಯಲ್ಲಿ 30 ವರ್ಷಗಳಿಗೆ ನವೀಕರಿಸಲು ಒಪ್ಪಿ, ಪ್ರಸ್ತಾವನೆಯನ್ನು ಪಾಲಿಕೆಯ ಸಭೆ ಮುಂದೆ ಮಂಡಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 19.07.2016ರ ಸಭೆಯ ನಿರ್ಣಯ."***

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ: 19.07.2016ರ ನಿರ್ಣಯವನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *ವಿಷಯದ ಸಂಖ್ಯೆ: ತೆಆಸ್ಥಾಸ/46/2016–17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 04–08–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ 25ರಲ್ಲಿ ಅನಧೀಕೃತವಾಗಿ ನಿರ್ಮಿಸಿರುವ ಕಟ್ಟಡವನ್ನು ತೆರವುಗೊಳಿಸುವ ಕಾಮಗಾರಿಗಳ ಅಂದಾಜು ಮೊತ್ತ ರೂ. 2.00 ಲಕ್ಷಗಳಿಗೆ 2016–17 ಲೆಕ್ಕಶಿರ್ಷಿಕೆ ಪಿ–0055 ಅಡಿ ಜಾಬ್‌ಸಂಖ್ಯೆ ನೀಡಲು ಜಂಟಿ ಆಯುಕ್ತರು (ಮಹದೇವಪುರ) ರವರು ಕೋರಿರುತ್ತಾರೆ. ಕೆ.ಎಂಸಿ ಕಾಯ್ದೆ 1976ರ ಸೆಕ್ಷನ್ 463(1) ರ ಪ್ರಕಾರ ಅನಧೀಕೃತ / ವ್ಯತಿರಿಕ್ತ ನಿರ್ಮಾಣವನ್ನು ತೆರವುಗೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳಬೇಕಿದೆ. 2016–17 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0055 ಅನುದಾನದ ವಿವರಗಳು ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| 2016–17ರ ಲೆಕ್ಕಶೀರ್ಷಿಕೆ: P- 0055 "Encroachment clearance Expenses ( Demolition charges)" Budget Book Page No. 111 | | | | |
|---|---|---|---|---|
| ಆಯವ್ಯಯದಲ್ಲಿ ಮೀಸಲಿಟ್ಟಿರುವ ಅನುದಾನ | ಜಾಬ್‌ಸಂಖ್ಯೆ ನೀಡಿರುವ ಮೊತ್ತ | ಜಾಬ್‌ಸಂಖ್ಯೆಗಾಗಿ ಅನುಮೋದನೆಗಾಗಿ ಕಡತ ಸಲ್ಲಿಸಿರುವ ಮೊತ್ತ | ಆಯವ್ಯಯದಲ್ಲಿ ಲಭ್ಯವಿರುವ ಅನುದಾನ | ಸದರಿ ಪ್ರಸ್ಥಾವನೆಯ ಮೊತ್ತ |
| **150.00** | **12.14** | **137.56** | **0.30** | **2.00** |

ಜಾಬ್‌ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುವ ಮೊತ್ತ ರೂ. 2.00 ಲಕ್ಷಗಳಿದ್ದು, ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ0055 ಅಡಿ ರೂ. 0.30 ಲಕ್ಷಗಳ ಅನುದಾನ ಮಾತ್ರ ಲಭ್ಯವಿರುತ್ತದೆ. ಅನುದಾನ ಕೊರತೆ ಇರುವುದರಿಂದ **IFMS** ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರವುವೊಳಿಸುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲಿ ಮಾಡಿಕೊಳ್ಳುವುದರಿಂದ ಕೊರತೆ ಮೊತ್ತವನ್ನು ಪಿ–0055 ಅಡಿ ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಬೇಕಿದೆ ಹಾಗೂ ಸದರಿ ಮೊತ್ತವನ್ನು 2016–17ರ ಪರಿಷ್ಕೃತ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕಿದೆ. 2016–17ರ ಲೆಕ್ಕಶೀರ್ಷಿಕೆ ಪಿ–0055 ಅಡಿ ಕೊರತೆ ಅನುದಾನ ರೂ. 2.00 ಲಕ್ಷಗಳ ಅನುದಾನವನ್ನು ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 04.08.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## *ವಿಷಯದ ಸಂಖ್ಯೆ: ತೆಆಸ್ಥಾಸ/47/2016–17*

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01.08.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಜಂಟಿ ಆಯುಕ್ತರು (SWM) ರವರು ದೇವರಚಿಕ್ಕನಹಳ್ಳಿ (ಬೇಗೂರು) ನ್ಯಾನಪ್ಪನಹಳ್ಳಿ ಗ್ರಾಮದ ಸರ್ವೆ ನಂ. 22 ರಲ್ಲಿ 6 ಎಕರೆ 9 ಗುಂಟೆ ಪ್ರದೇಶದಲ್ಲಿ ಬಹಳಷ್ಟು ದಿನಗಳಿಂದ ಕಸದ ರಾಶಿ ಹಾಕಿದ್ದು, ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಸದರಿ ಪ್ರದೇಶವನ್ನು ಸ್ವಚ್ಚಗೊಳಿಸಿ ಆಟದ ಮೈದಾನ ಮತ್ತು ನಡೆದಾರಿ ನಿರ್ಮಿಸುವ ಕಾಮಗಾರಿಯ ಅಂದಾಜು ಮೊತ್ತ ರೂ. 199.80 ಲಕ್ಷಗಳಿಗೆ ಕೇಂದ್ರ ಸರ್ಕಾರದ ಯೋಜನೆ ಸ್ವಚ್ಚ ಭಾರತ್ ಮಿಷನ್ ಅಡಿಯಲ್ಲಿ ಬಿಡುಗಡೆಯಾಗಿರುವ ರೂ. 41.15 ಕೋಟಿಗಳಲ್ಲಿ ಜಾಬ್‌ಸಂಖ್ಯೆ ನೀಡಲು ಕೋರಿರುತ್ತಾರೆ. ಸದರಿ ಮೊತ್ತಕ್ಕೆ ಕ್ರಿಯಾಯೋಜನೆ ಲಭ್ಯವಿಲ್ಲದ ಬಗ್ಗೆ ಚರ್ಚಿಸಲಾಗಿ, ಅವಶ್ಯಕತೆಗೆ ಅನುಗುಣವಾಗಿ SWM ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಸದರಿ ಮೊತ್ತಕ್ಕೆ ಕ್ರಿಯಾಯೋಜನೆ

ಸಿದ್ಧಪಡಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಮಾನ್ಯ ಆಯುಕ್ತರು ಕಾಮಗಾರಿ ಕೈಗೊಳ್ಳಲು ಜಾಬ್‌ಸಂಖ್ಯೆ ನೀಡಲು ಆದೇಶಿಸಿರುತ್ತಾರೆ.

2016–17ರ ಆಯವ್ಯಯದ (ಪುಟಸಂಖ್ಯೆ–180) ರಲ್ಲಿ ಕೇಂದ್ರ ಸರ್ಕಾರದ ಅನುದಾನದ ಕಾಮಗಾರಿಗಳು– ಸ್ವಚ್ಛ ಭಾರತ್ ಅಭಿಯಾನದಡಿ ಶೌಚಾಲಯಗಳ ನಿರ್ಮಾಣ ಪಿ–3112 ಅಡಿ ರೂ. 150.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ಪ್ರಸ್ತಾವನೆ ಮೊತ್ತ ರೂ. 199.80 ಲಕ್ಷಗಳಾಗಿದ್ದು, ಮಾನ್ಯ ಆಯುಕ್ತರ ಆದೇಶದಂತೆ ಜಾಬ್‌ಸಂಖ್ಯೆ ನೀಡಲು ರೂ. 49.88 ಲಕ್ಷಗಳ ಅನುದಾನದ ಕೊರತೆ ಇರುತ್ತದೆ. ಆಯವ್ಯಯದಲ್ಲಿ ಕೊರತೆ ಅನುದಾನಕ್ಕೆ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ಈಗಾಗಲೇ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ರೂ. 41.15 ಕೋಟಿ ಅನುದಾನ ಬಿಡುಗಡೆಗೊಳಿಸಿರುವುದರಿಂದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ ಲೆಕ್ಕಶೀರ್ಷಿಕೆ ಪಿ–3112 ಅಡಿ ರೂ. 49.88 ಲಕ್ಷಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ರೂ. 199.88 ಲಕ್ಷಗಳಿಗೆ 175–17–000001 ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01.08.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/48/2016–17***

ಆಯುಕ್ತರ ದಿನಾಂಕ: 28–07–2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಛೇರಿ ಕೆಲಸಕಾರ್ಯಗಳ ಹಿತದೃಷ್ಟಿಯಿಂದ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶದನ್ವಯ ಮೆ॥ ಸ್ಟ್ರಾಟೆಜಿಕ್ ಔಟ್ ಸೋರ್ಸಿಂಗ್ ಸರ್ವಿಸಸ್ಸ್ ಸಂಸ್ಥೆ ವತಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ಗಣಕ ಯಂತ್ರ ಆಪರೇಟರ್‌ಗಳ ಸೇವೆಯನ್ನು ಎರಡು ವರ್ಷದ ಅವಧಿಗೆ ಪಡೆಯಲಾಗಿರುತ್ತದೆ. ಸದರಿ ಸೇವೆಯು ದಿನಾಂಕ: 01–04–2016ಕ್ಕೆ ಮುಕ್ತಾಯಗೊಂಡಿರುವುದರಿಂದ ದಿನಾಂಕ: 02–04–2016 ರಿಂದ ಅನ್ವಯಿಸುವಂತೆ ಪಾಲಿಕೆಯಲ್ಲಿ ಟೆಂಡರ್ ಮೂಲಕ ಗಣಕಯಂತ್ರ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವ ಪ್ರಕ್ರಿಯೆ ಪೂರ್ಣಗೊಳ್ಳುವವರೆವಿಗೆ ಕಛೇರಿ ಆದೇಶದಲ್ಲಿ ಮುಂದುವರೆಸಲಾಗಿರುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ಕಛೇರಿಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಮೆ॥ ಸ್ಟ್ರಾಟೆಜಿಕ್ ಔಟ್ ಸೋರ್ಸಿಂಗ್ ಸರ್ವಿಸಸ್ಸ್ ಸಂಸ್ಥೆಯ ಮುಖೇನ ಕಾರ್ಯನಿರ್ವಹಿಸುತ್ತಿರುವ ಗಣಕ ಯಂತ್ರ ನಿರ್ವಾಹಕರುಗಳಿಗೆ ದಿನಾಂಕ: 01–04–2014 ರಿಂದ 30–06–2015ರ ವರೆಗೆ ಹೆಚ್ಚಳವಾಗಿರುವ ವ್ಯತ್ಯಾಸದ ವಿ.ಡಿ.ಎ ಬಿಲ್ಲಿನ ಮೊತ್ತವನ್ನು ಪಾವತಿಸಲಾಗಿರುತ್ತದೆ.

ಮೆ॥ ಸ್ಟ್ರಾಟೆಜಿಕ್ ಔಟ್ ಸೋರ್ಸಿಂಗ್ ಸರ್ವಿಸಸ್ಸ್ ಸಂಸ್ಥೆ ರವರು ಮನವಿ ಸಲ್ಲಿಸಿ, ಕನಿಷ್ಟ ವೇತನ ಕಾಯ್ದೆ ಅಡಿಯಲ್ಲಿ ಕಂಪ್ಯೂಟರ್ ಆಪರೇಟರ್‌ಗಳ ವೇತನವನ್ನು ಸರ್ಕಾರದ ಕಾರ್ಮಿಕ ಇಲಾಖೆಯು ಪರಿಷ್ಕರಿಸಿದ್ದು, ಅದರಂತೆ ವೇತನವನ್ನು ಪಾವತಿಸಬೇಕೆಂದು ಹಾಗೂ ಪರಿಷ್ಕರಿಸಿದ ವೇತನವನ್ನು ಪಾವತಿಸಲು ಅನುಮತಿಸಿದರೆ ಹೊಸ ಕರಾರು {Contract Service Agreement} ಮಾಡಿಕೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

ಮುಂದುವರೆದು, ಸರ್ಕಾರದ ಕಾರ್ಮಿಕ ಇಲಾಖೆಯು ಅಧಿಸೂಚನೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು ಹಾಗೂ ಗೊತ್ತುಪಡಿಸಿದ ಆಗ್ಲೋಮರೇಷನ್

ಪ್ರದೇಶಗಳಲ್ಲಿ {ವಲಯ-1} ಕಾರ್ಯನಿರ್ವಹಿಸುತ್ತಿರುವ ಶೀಘ್ರಲಿಪಿಗಾರ / ಕಂಪ್ಯೂಟರ್ ಆಪರೇಟರ್‌ಗಳಿಗೆ ದಿನಕ್ಕೆ ರೂ. 460-38 ಗಳು ಮತ್ತು ತಿಂಗಳಿಗೆ ರೂ. 11,970-00 ಗಳನ್ನು ದಿನಾಂಕ: 01-01-2016 ರಿಂದ ಜಾರಿಗೆ ಬರುವಂತೆ ನಿಗಧಿಪಡಿಸಲಾಗಿರುತ್ತದೆ.

ಸದರಿ ಆದೇಶವನ್ನು ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಸಂಬಂಧ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ವರದಿಯನ್ನು ಕೋರಲಾದಂತೆ, ಕಾನೂನು ಕೋಶದ ಮುಖ್ಯಸ್ಥರು "ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳಿಗೆ ಕನಿಷ್ಟ ವೇತನ ಕಾಯ್ದೆ ಅಡಿಯಲ್ಲಿ ವೇತನವನ್ನು ಈಗಾಗಲೇ ಪಾವತಿಸಲಾಗುತ್ತಿರುತ್ತದೆ. ಪ್ರಸ್ತುತವಾಗಿ ಜಾರಿಗೊಳಿಸಿರುವ ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆ ಸಂಖ್ಯೆ: ಕಾಇ 123 ಎಲ್‌ಡಬ್ಲ್ಯೂಎ 2015, ದಿನಾಂಕ: 29-02-2016ನ್ನು ಅಳವಡಿಸಿಕೊಳ್ಳುವ ಬಗ್ಗೆ ಸೂಕ್ತ ಪ್ರಾಧಿಕಾರದ ಗಮನಕ್ಕೆ ತಂದು ಸರ್ಕಾರದ ಅಧಿಸೂಚನೆ ದಿನಾಂಕ: 29-02-2016ರಂತೆ ವೇತನ ಪಾವತಿಸಲು ನಿಯಮಾನುಸಾರ ಕ್ರಮವಹಿಸಬಹುದಾಗಿರುತ್ತದೆಯೆಂದು ತಿಳಿಸಿರುತ್ತಾರೆ."

ಆದುದರಿಂದ ಸರ್ಕಾರದ ಕಾರ್ಮಿಕ ಇಲಾಖೆಯ ಅಧಿಸೂಚನೆಯನ್ನು ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕನಿಷ್ಟ ವೇತನ ಕಾಯ್ದೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪ್ಯೂಟರ್ ಆಪರೇಟರ್‌ಗಳಿಗೆ ಈಗಾಗಲೇ ಕೆಲಸ ನಿರ್ವಹಿಸಿರುವ ಅವಧಿಗೆ ಅತಿ ಜರೂರಾಗಿ ವೇತನ ಬಿಡುಗಡೆ ಮಾಡಲು ಅಗತ್ಯವಾದ ಬಿಲ್ಲುಗಳನ್ನು ಆಡಳಿತ ಶಾಖೆ ಸಿದ್ದಪಡಿಸಿ ಪಾವತಿ ಸಂಬಂಧವಾಗಿ ಮುಖ್ಯಲೆಕ್ಕಾಧಿಕಾರಿಗೆ ತಲುಪಿಸಿ, ಗುತ್ತಿಗೆದಾರ ಸಂಸ್ಥೆಗೆ ಕಂಪ್ಯೂಟರ್ ಆಪರೇಟರ್‌ಗಳ ವೇತನಕ್ಕೆ ಸಾಕಾಗುವಷ್ಟು ಮೊತ್ತವನ್ನು ಬಿಡುಗಡೆ ಮಾಡುವುದು ಹಾಗೂ ಕಂಪ್ಯೂಟರ್ ಆಪರೇಟರ್‌ಗಳ ಮಾಸಿಕ ವೇತನವನ್ನು ಪ್ರತಿ ತಿಂಗಳ 10ನೇ ತಾರೀಖಿನ ಒಳಗಾಗಿ ವಿಳಂಭ ಮಾಡದೇ ಪಾವತಿಸುವಲ್ಲಿ ಗುತ್ತಿಗೆದಾರ ಸಂಸ್ಥೆಗೆ ಷರತ್ತು ವಿಧಿಸಿ ಹಣ ಬಿಡುಗಡೆ ಮಾಡುವುದು. ಸರ್ಕಾರವು ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ ವೇತನ ಹೆಚ್ಚಿಸಿ ಆದೇಶಿಸಿ ಜಾರಿಗೊಳಿಸಿರುವ ದಿನಾಂಕದಿಂದ ಅನ್ವಯವಾಗುವಂತೆ ಕಂಪ್ಯೂಟರ್ ಆಪರೇಟರ್‌ಗಳಿಗೆ ವೇತನದ ಬಾಕಿಯನ್ನು ನೀಡುವುದು ಮತ್ತು ಸರ್ಕಾರಿ ಆದೇಶದಂತೆ ಪ್ರತಿಯೊಬ್ಬ ಕಂಪ್ಯೂಟರ್ ಆಪರೇಟರ್‌ಗೆ ನಿಗದಿಪಡಿಸಿದಂತೆ ಮಾಸಿಕ ಮೊತ್ತವನ್ನು ನೀಡುವ ಮಾರ್ಪಾಟನೊಂದಿಗೆ ಆಯುಕ್ತರ ದಿನಾಂಕ: 28-07-2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/49/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 05-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ನಂ.37 ಯಶವಂತಪುರದಲ್ಲಿ ಮನೆಗಳನ್ನು ನಿರ್ಮಾಣ ಮಾಡುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, 2010-11ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-2340 ಅಡಿಯಲ್ಲಿ ಜಾಬ್‌ಸಂಖ್ಯೆ: 037-11-000018ರಲ್ಲಿ 413.40 ಲಕ್ಷಗಳಿಗೆ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆಯಾಗಿದ್ದು, ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಅನುಮೋದನೆಯಾಗಿರುವುದಿಲ್ಲ.

ಈಗಾಗಲೇ ಜಾಬ್ ಸಂಖ್ಯೆಯನ್ನು ನೀಡಿ 5 ವರ್ಷಗಳಾಗಿರುವುದರಿಂದ ಸದರಿ ಕಾಮಗಾರಿಯನ್ನು ಎಂದು ಪರಿಗಣಿಸಲು ಬರುವುದಿಲ್ಲ. 2016-17ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸಿಕೊಂಡು,

ಹಳೆಯ ಜಾಬ್‌ಕೋಡ್ ರದ್ದುಪಡಿಸಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ಅನುದಾನ ಒದಗಿಸಲು, ಅನುಮೋದನೆ ಪಡೆಯಲು ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಆದೇಶ ಸಂಖ್ಯೆ: (ಜಿ)1179/15 ದಿನಾಂಕ: 04.03.2016 ರಂದು ಆದೇಶಿಸಿರುತ್ತಾರೆ.

ಆದ್ದರಿಂದ ಮೇಲ್ಕಂಡ ಕಾಮಗಾರಿಗೆ 2016-17ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ನೀಡಿ, ಹೊಸದಾಗಿ ಜಾಬ್ ಸಂಖ್ಯೆ ನೀಡಲು ಅನುಮೋದನೆಯನ್ನು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 05.08.2016ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/50/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 01-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015-16 ನೇ ಸಾಲಿನ ಆಯವ್ಯಯದಲ್ಲಿ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದ ಪೈಕಿ ಸರ್ಕಾರದ ಆದೇಶ ಸಂಖ್ಯೆ : ನಅಇ 279 ಎಸ್.ಎಫ್.ಸಿ 2015, ಬೆಂಗಳೂರು ದಿನಾಂಕ : 08.01.2016 ರಲ್ಲಿ ರೂ. 976.00 ಕೋಟಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಿದೆ. ಅದರಲ್ಲಿ ಕ್ರ.ಸಂ 1 ರಲ್ಲಿ ಬೆಂಗಳೂರು ನಗರದಲ್ಲಿ ಘನತ್ಯಾಜ್ಯ ಸಂಸ್ಕರಣ ಘಟಕಗಳ ಕಾರ್ಯಾರಂಭಕ್ಕೆ ರೂ. 200.00 ಕೋಟಿಗಳ ಅನುದಾನ ನಿಗಧಿಪಡಿಸಿದೆ. ಸರ್ಕಾರದ ಆದೇಶ ಸಂಖ್ಯೆ: ನಅಇ 238 ಎಸ್.ಎಫ್.ಸಿ 2016, ಬೆಂಗಳೂರು ದಿನಾಂಕ : 18-06-2016 ರಲ್ಲಿ ಮೇಲ್ಕಂಡ ರೂ. 200.00 ಕೋಟಿಗಳಲ್ಲಿ **ವಾರ್ಡ್ ಸಂಖ್ಯೆ 40ರ ದೊಡ್ಡಬಿದರಕಲ್ಲು ಘಟಕ, ವಾರ್ಡ್ 198ರ ಲಿಂಗಧೀರನಹಳ್ಳಿ ಘಟಕ, ಸುಬ್ಬರಾಯನ ಪಾಳ್ಯ ಘಟಕ, ಸೀಗೆಹಳ್ಳಿ, ಕನ್ನಹಳ್ಳಿ ಘಟಕಗಳ ಒಟ್ಟು 32 ಕಾಮಗಾರಿಗಳ ಅಂದಾಜು ಮೊತ್ತ ರೂ. 66.00 ಕೋಟಿಗಳಿಗೆ ನಗರೋತ್ಥಾನ ಯೋಜನೆಯ ಲೆಕ್ಕಶೀರ್ಷಿಕೆ ಅಡಿ ಭರಿಸಲು ಅನುಮೋದನೆ ನೀಡಿದೆ.** ನಗರೋತ್ಥಾನ ಯೋಜನೆಯ ಕಾಮಗಾರಿಗಳನ್ನು 2016-17ರ ಲೆಕ್ಕಶೀರ್ಷಿಕೆ "P-3106 ನಗರೋತ್ಥಾನ ಕಾಮಗಾರಿಗಳು" Current Works ಅಡಿ ಜಾಬ್‌ಸಂಖ್ಯೆ ನೀಡಬೇಕಿದೆ. ಕಾಮಗಾರಿಗಳಿಗೆ ಜಾಬ್‌ಸಂಖ್ಯೆ ನೀಡಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ. 2016-17ರ ಆಯವ್ಯಯದಲ್ಲಿ (ಪುಟಸಂಖ್ಯೆ 184) ಲೆಕ್ಕಶೀರ್ಷಿಕೆ P-3106 ನ Current Works ಅಡಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಮದ ತುರ್ತಾಗಿ ಕೈಗೊಳ್ಳಬೇಕಿದೆ. ಆಯವ್ಯಯದಲ್ಲಿ ಅನುದಾನ ಮೀಸಲಿರಿಸದ ಕಾರಣ IFMS ತಂತ್ರಾಂಶದಲ್ಲಿ ಜಾಬ್‌ಸಂಖ್ಯೆ ನೀಡಲು ಅವಕಾಶವಿರುವುದಿಲ್ಲ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆ ನಿರೀಕ್ಷಿಸಿ 32 ಕಾಮಗಾರಿಗಳ ಮೊತ್ತ ರೂ. 6600.00 ಲಕ್ಷಗಳ ಅನುದಾನವನ್ನು 2016-17ರ ಲೆಕ್ಕಶೀರ್ಷಿಕೆ P-3106ನ Current Works ಅಡಿ ಅಳವಡಿಸಿಕೊಂಡು 310-17-000026 ರಿಂದ 310-17-000057 ರವರೆಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಘಟನೋತ್ತರ ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

***ವಿಷಯದ ಸಂಖ್ಯೆ: ತೆಆಸ್ಥಾಸ/51/2016-17***

ಆಯುಕ್ತರ ದಿನಾಂಕ: 18-06-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ-80 ಹೊಯ್ಸಳನಗರ ಸರ್ವೆ ನಂ:36ರಲ್ಲಿ ಲಕ್ಷ್ಮೀಪುರಂ ನಿವಾಸಿಗಳಿಗೆ ಕ್ರಯಪತ್ರವನ್ನು ನೊಂದಾಯಿಸಿಕೊಂಡು

ಪಾಲಿಕೆ ವಿಷಯದ ಸಂಖ್ಯೆ:32(700) ದಿನಾಂಕ: 10-12-1985ರಲ್ಲಿ ತೆಗೆದುಕೊಂಡ ನಿರ್ಣಯದಂತೆ ದಿನಾಂಕ: 19-08-1987ರಂದು 122 ಫಲಾನುಭವಿಗಳಿಗೆ ಗುತ್ತಿಗೆ ಮತ್ತು ಕರಾರು ಪತ್ರವನ್ನು ನೊಂದಾಯಿಸಿಕೊಡಲಾಗಿರುತ್ತದೆಂದು, ಅದರಂತೆ ದಿನಾಂಕ: 20-03-1998ರಲ್ಲಿ ಜಂಟಿ ಆಯುಕ್ತರು (ಅಭಿವೃದ್ಧಿ) ರವರು ಕ್ರಯದ ಮೊತ್ತವನ್ನು ಕಂತಿನ ರೂಪದಲ್ಲಿ ಪಾವತಿಸುವ ಸಮಯದಲ್ಲಿ ತಡವಾಗಿ ಪಾವತಿಸಿರದೆ ಅಂತಹ ಫಲಾನುಭವಿಗಳಿಂದ ಬಡ್ಡಿಯನ್ನು ಸೇರಿಸಿ ಕ್ರಯದ ಮೊತ್ತವನ್ನು ಪಾವತಿಸಿಕೊಳ್ಳಬೇಕಾಗಿರುತ್ತದೆ ಎಂದು ವರದಿಸಿರುತ್ತಾರೆ. ಮಾನ್ಯ ಸ್ಥಳೀಯ ಶಾಸಕರು ಸದರಿ ನಿವಾಸಿಗಳಿಗೆ ಕ್ರಯಪತ್ರವನ್ನು ನೊಂದಾಯಿಸಿಕೊಡುವ ಬಗ್ಗೆ ಯಾವುದೇ ತರಹದ ಬಡ್ಡಿಯ ಹೊರೆಯನ್ನು ವಿಧಿಸದೇ ಬಡ್ಡಿ ಮನ್ನಾ ಮಾಡಿ ಕಟ್ಟಡದ ವೆಚ್ಚವನ್ನು ಮಾತ್ರ ಪಡೆದು ಕ್ರಯಪತ್ರ ನೊಂದಾಯಿಸಿಕೊಡಲು ಕೋರಿರುತ್ತಾರೆ.

ಈ ವಿಷಯದ ಬಗ್ಗೆ ಕಾನೂನು ಶಾಖೆಯ ಅಭಿಪ್ರಾಯ ಕೋರಲಾಗಿ ಕ್ರಯಪತ್ರ ವಿತರಿಸುವ ಬಗ್ಗೆ ಕೆ.ಎಂ.ಸಿ ಕಾಯ್ದೆ ಕಲಂ 176ರ ಅಡಿಯ ಸಕ್ಷಮ ಪ್ರಾಧಿಕಾರದ ಹಂತದಲ್ಲಿ ತೀರ್ಮಾನ ಕೈಗೊಳ್ಳಬಹುದಾಗಿದೆಯೆಂದು ಅಭಿಪ್ರಾಯಿಸಿರುತ್ತಾರೆ. ಹಾಗೂ ಉಪ ಆಯುಕ್ತರು (ಪೂರ್ವ) ರವರು ಕಂದಾಯ ಪರಿವೀಕ್ಷಕರು, ಕಂಡಿಕೆ (114) ರಲ್ಲಿ ಲಕ್ಷ್ಮೀಪುರ ಸ್ಲಂ ನಿವಾಸಿಗಳಿಗೆ ಹುಡ್ಕೋ ಯೋಜನೆಯಡಿಯಲ್ಲಿ ನಿರ್ಮಿಸಲಾಗಿದೆಯೆಂದು ವರದಿಸಿರುವ ಹಿನ್ನೆಲೆಯಲ್ಲಿ ಅಸಲು ಮತ್ತು ಬಡ್ಡಿಯನ್ನು ಮನ್ನಾ ಮಾಡುವ ಬಗ್ಗೆ ಆದೇಶವನ್ನು ಪಡೆದು ಕ್ರಮವಿಡುವ ಬಗ್ಗೆ ಮಂಡಿಸಿದ್ದು, ಜಂಟಿ ಆಯುಕ್ತರು(ಪೂರ್ವ) ರವರು ಮಾನ್ಯ ಆಯುಕ್ತರವರ ಅವಗಾಹನೆಗೆ ತಂದು ಮುಂದಿನ ಕ್ರಮನುಸಾರಣೆ ಮಾಡಬಹುದೆಂದು ವರದಿಸಿದ್ದು, ಸ್ಪಷ್ಟವಾದ ಅಭಿಪ್ರಾಯ ಮಂಡಿಸಿರುವುದಿಲ್ಲ. (ವಲಯದಿಂದ ಮೂಲ ಕಡತದೊಂದಿಗೆ ಮಂಡಿಸಿರುವುದಿಲ್ಲ).

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಹುಡ್ಕೋ ಯೋಜನೆಯಡಿಯಲ್ಲಿ 1983-84 ರಿಂದ 2003-04ನೇ ಸಾಲಿನ ವರೆವಿಗೆ ವಾಂಬೆ ಯೋಜನೆಯಡಿ 2002-2009ರ ವರೆಗೆ ಒಟ್ಟು 58149 ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿದ್ದು, ಸದರಿ ಯೋಜನೆಯಡಿ ಫಲಾನುಭವಿಗಳಿಗೆ ಬಾಕಿ ಇರುವ ಸಾಲ 122.03 ಕೋಟಿ ಹಾಗೂ ಅಸಲು ರೂ.154.31 ಕೋಟಿ ಒಟ್ಟು 276.34 ಕೋಟಿ ರೂಗಳನ್ನು ಸರ್ಕಾರದ ಆದೇಶದ ಸಂಖ್ಯೆ: ವಇ 18 ಕೋಮಂಲೆ 2014 ಬೆಂಗಳೂರು ದಿನಾಂಕ:03-09-2014ರಂತೆ ಸಂಪೂರ್ಣ ಮನ್ನಾ ಮಾಡಿ ಆದೇಶಿಸಿರುತ್ತದೆ.

ಆದುದರಿಂದ, ಉಪ ಆಯುಕ್ತರು (ಪೂರ್ವ) ರವರ ವರದಿ ಹಾಗೂ ಜಂಟಿ ಆಯುಕ್ತರು (ಪೂರ್ವ) ರವರ ವರದಿಯಂತೆ (ವಸತಿ ಇಲಾಖೆಯ ಆದೇಶದ ಸಂಖ್ಯೆ:ವಇ 18 ಕೋಮಂಲೆ 2014 ಬೆಂಗಳೂರು ದಿನಾಂಕ: 03-09-2014) ಲಕ್ಷ್ಮೀಪುರಂ ಸ್ಲಂ ನಿವಾಸಿಗಳಿಗೆ ಹುಡ್ಕೋ ಯೋಜನೆಯಡಿಯಲ್ಲಿ ನಿರ್ಮಿಸಲಾಗಿದೆಯೆಂದು ವರದಿ ಮಾಡಿರುವ ಹಿನ್ನೆಲೆಯಲ್ಲಿ 122 ಜನ ಫಲಾನುಭವಿಗಳಿಗೆ ಅಸಲು ಮತ್ತು ಬಡ್ಡಿಯನ್ನು ದಿನಾಂಕ: 03-09-2014 ರ ಸರ್ಕಾರದ ಆದೇಶದಂತೆ ಮನ್ನಾ ಮಾಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಬಿಬಿಎಂಪಿ ಸಭೆ ಮುಂದೆ ಮಂಡಿಸಿ

ಘನ ಸರ್ಕಾರದ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ ಮೇರೆಗೆ, ***"ವಾರ್ಡ್ ಸಂಖ್ಯೆ: 80, ಲಕ್ಷ್ಮೀಪುರ ಸ್ಲಂ ನಿವಾಸಿಗಳಿಗೆ ಹುಡ್ಕೋ ಯೋಜನೆಯಡಿಯಲ್ಲಿ ನಿರ್ಮಿಸಲಾಗಿರುವ ಮನೆಗಳ 122 ಫಲಾನುಭವಿಗಳಿಗೆ ಕ್ರಯಪತ್ರ ನೊಂದಾಯಿಸಿಕೊಡುವ ಕುರಿತು ಕಾನೂನು ಕೋಶದ ಅಭಿಪ್ರಾಯದಂತೆ ಸದರಿ ಫಲಾನುಭವಿಗಳಿಗೆ ಕ್ರಯಪತ್ರ ನೊಂದಾಯಿಸುವ ಸಂಬಂಧ ಮಂಡಿಸಲಾಗಿರುವ ಆಯುಕ್ತರ ದಿನಾಂಕ:18-06-2016ರ ಟಿಪ್ಪಣೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 19.07.2016ರ ಸಭೆಯ ನಿರ್ಣಯ.***

***-ಮುಂದೂಡಿದೆ-***

## ವಿಷಯದ ಸಂಖ್ಯೆ: ತೆಆಸ್ಥಾಸ/52/2016-17

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 08-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 2015-16ನೇ ಸಾಲಿಗೆ ಬಿಬಿಎಂಪಿಗೆ ಘೋಷಿಸಿರುವ ರೂ. 1500.00 ಕೋಟಿಗಳ ಅನುದಾನದಲ್ಲಿ ಬಿಬಿಎಂಪಿಗೆ ಹೊಸದಾಗಿ ಸೇರ್ಪಡೆಗೊಂಡಿರುವ ಹಿಂದಿನ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ 279 ನಅಈ ಎಸ್.ಎಫ್.ಸಿ 2015, ಬೆಂಗಳೂರು, ದಿನಾಂಕ 08-01-2016 ರಲ್ಲಿ ರೂ. 250.00 ಕೋಟಿಗಳ ವಿಶೇಷ ಅನುದಾನವನ್ನು ಮೀಸಲಿರಿಸಿದೆ. ಸರ್ಕಾರದ ಅನುಮೋದನೆಯಂತೆ 2015-16 ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ 7 ನಗರಸಭೆ ಮತ್ತು 1 ಪುರಸಭೆಯ ವ್ಯಾಪ್ತಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿ ಪಿ-3089 ಅಡಿ ರೂ. 175.00 ಕೋಟಿಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದೆ. ಉಳಿಕೆ ರೂ.75.00 ಕೋಟಿಗಳ ಪೈಕಿ ಪ್ರಸ್ಥುತ ನಅಇ 73 ಎಸ್‌ಎಫ್‌ಸಿ 2016, ಬೆಂಗಳೂರು ದಿನಾಂಕ: 25-06-2016ರಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರದ ರೂ.20.00 ಕೋಟಿಗಳಿಗೆ ಅನುಮೋದನೆ ನೀಡಿದೆ. 2016-17ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-3089 ಅಡಿ ಚಾಲ್ತಿ ಕಾಮಗಾರಿಗಳಿಗಾಗಿ ಅನುದಾನ ಮೀಸಲಿರಿಸಿರುವುದಿಲ್ಲ. ಸರ್ಕಾರದ ಅನುಮೋದನೆಯಂತೆ ಜಾಬ್‌ಸಂಖ್ಯೆ ನೀಡಿ ಕಾಮಗಾರಿ ಅನುಷ್ಠಾನಗೊಳಿಸಲು ಪಿ-3089 ಅಡಿ ರೂ.20.00 ಕೋಟಿಗಳ ಅನುದಾನವನ್ನು ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಬೇಕಿದ್ದು, ಹೆಚ್ಚುವರಿಯಾಗಿ ಅಳವಡಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

### -ಮುಂದೂಡಿದೆ-

## ಹೆಚ್ಚುವರಿ ವಿಷಯ:-

## ವಿಷಯದ ಸಂಖ್ಯೆ: ತೆಆಸ್ಥಾಸ/53/2016-17

ಆಯುಕ್ತರ ದಿನಾಂಕ: 18-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಎಸ್.ಎಲ್.ಗಂಗಾಧರಪ್ಪ, ಅಧ್ಯಕ್ಷರು, ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ ನಂ. 67/1, ಡಾ|| ರಾಜ್‌ಕುಮಾರ್ ತಾಂತ್ರಿಕ ಕುಟೀರ, 6ನೇ ಅಡ್ಡರಸ್ತೆ, 5ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು-03 ರವರು ಮಾನ್ಯ ಆಯುಕ್ತರು ರವರಿಗೆ ಅರ್ಜಿ ಸಲ್ಲಿಸಿ, ಸದರಿ ಸಂಘ ಸಂಸ್ಥೆಯು ಕನ್ನಡದ ಅಭಿವೃದ್ಧಿ ಮತ್ತು ಸಾಂಸ್ಕೃತಿಕ ಹಾಗೂ ಔದ್ಯೋಗಿಕ ನೆಲೆಗಟ್ಟಿಗಾಗಿ ಶ್ರಮಿಸುತ್ತಿರುವ ಸರ್ಕಾರದಿಂದ ನೋಂದಣಿಯಾಗಿರುವ ಮತ್ತು ಸರ್ಕಾರ ನಿರ್ಮಿಸಿರುವ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಸದರಿ ಸಂಸ್ಥೆಯು ಕನ್ನಡಕ್ಕೆ ಆದ್ಯತೆ ನೀಡಲು ಮುಂದಾಗಿರುವ ಸರ್ಕಾರದ ನೀತಿಯಂತೆ ಕನ್ನಡದಲ್ಲಿ ಅಭ್ಯಾಸ ಮಾಡುವವರಿಗೆ ಸ್ಥಾಪಿಸಿರುವ ಪ್ರಮುಖವಾಗಿ ಬೆಂಗಳೂರು ನಗರವಾಸಿ ನಿರುದ್ಯೋಗಿಗಿಗೆ ಆಸಕ್ತ ಅಭ್ಯರ್ಥಿಗಳಿಂದ ಉದ್ಯೋಗವಲಂಬಿತ ಉಚಿತ ಕನ್ನಡ ಕಂಪ್ಯೂಟರ್ ತಂತ್ರಜ್ಞಾನವನ್ನು ಕಳೆದ 12 ವರ್ಷಗಳಿಂದ 19,000 ಸಾವಿರ ಜನರಿಗೆ ತರಬೇತಿ ನೀಡಿ ಅರ್ಧದಷ್ಟು ಅಭ್ಯರ್ಥಿಗಳಿಗೆ ಉದ್ಯೋಗ ದೊರಕಲು ಕಾರಣವಾಗಿರುವ ಸಂಸ್ಥೆಯ ವಾರ್ಷಿಕ ಚಟುವಟಿಕೆ ಮತ್ತು ನಿರ್ವಹಣೆಗಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2016-17ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಕನ್ನಡ ಗಣಕ ಉಚಿತ ತರಬೇತಿ ಕೇಂದ್ರಕ್ಕೆ ಮೀಸಲಿಟ್ಟಿರುವ ರೂ.25.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಮುಂದುವರೆದಂತೆ, ಮುಂದುವರೆದಂತೆ, 2016-17 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆ ಪಿ-0048ರಲ್ಲಿ ರೂ.500.00 ಲಕ್ಷಗಳನ್ನು ಮೀಸರಿಸಲಾಗಿರುತ್ತದೆ ಹಾಗೂ 2016-

17ನೇ ಸಾಲಿನ ಆಯವ್ಯಯದಲ್ಲಿ ಅನುಬಂಧ-2ರಲ್ಲಿ 30 ಸಂಘ ಸಂಸ್ಥೆಗಳ ಪಟ್ಟಿಯಲ್ಲಿ ಕ್ರಮ ಸಂಖ್ಯೆ-02ರಲ್ಲಿ 25.00ಲಕ್ಷಗಳ ಅನುದಾನ ಮೀಸರಿಸಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಕನ್ನಡ ಗಣಕ ಉಚಿತ ತರಬೇತಿ ಕೇಂದ್ರ (ರಿ), ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: 2016-17ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸುವ ಅನುದಾನದಂತೆ ಹಣವನ್ನು ಬಿಡುಗಡೆ ಮಾಡಲು ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***ವಿಷಯದ ಸಂಖ್ಯೆ: ತೆಆಸ್ಥಾಸ/55/2016-17***

ಆಯುಕ್ತರ ದಿನಾಂಕ: 06-08-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಇಂದಿರಾ ಗಾಂಧಿ ಸ್ಮಾರಕ ದತ್ತಿ ಸಂಸ್ಥೆಗೆ ಪ್ಲೈನ್ ರಸ್ತೆಯಲ್ಲಿರುವ ನಗರ ಪಾಲಿಕೆಗೆ ಸೇರಿರುವ ಕಟ್ಟಡದ ವಿಸ್ತೀರ್ಣ 152.6+153.6/2 x 133 ಒಟ್ಟು 20,362.3 ಚದರ ಅಡಿಗಳ ಈ ಸ್ಥಳವನ್ನು ದಿನಾಂಕ: 15-04-1991 ರಿಂದ ಜಾರಿಗೆ ಬರುವಂತೆ ತಿಂಗಳ ಗುತ್ತಿಗೆ ಬಾಡಿಗೆ ಮೊತ್ತ 1500/-ರೂ ಗಳ ಆಧಾರದ ಮೇಲೆ 12 ತಿಂಗಳ ಅವಧಿಗೆ ಸಿಮೀತವಾಗುವಂತೆ ಕರಾರು ಪತ್ರದ ಮುಖೇನ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಮೇಲ್ಕಂಡ ಸಂಸ್ಥೆಯವರು ಮಿಲ್ಲರ್ ಕೆರೆ ಅಂಗಳದಲ್ಲಿ ಕಛೇರಿ ಕಟ್ಟಡವನ್ನು ಕಟ್ಟಿಕೊಳ್ಳುವ ಸಲುವಾಗಿ ದಿನಾಂಕ: 29-04-1991 ವಿಷಯದ ಸಂಖ್ಯೆ: 5(41)ರ ನಿರ್ಣಯದ ಪ್ರಕಾರ ಈ ಸಂಸ್ಥೆಯವರಿಗೆ (112+123)/2 x 144+166)/2 ಅಡಿ ವಿಸ್ತೀರ್ಣವುಳ್ಳ ಖಾಲಿ ಜಾಗವನ್ನು ವಾರ್ಷಿಕ 100/-ಗಳ ಆಧಾರದ ಮೇಲೆ ಗುತ್ತಿಗೆಗೆ ಹಣ ವಿಧಿಸಿ 99 ವರ್ಷಗಳ ಧೀರ್ಘಾವಧಿಗೆ ಹಂಚಿಕೆ ಮಾಡಲಾಗಿರುತ್ತದೆ. ಹಾಗೂ ಈ ಸ್ಥಳದಲ್ಲಿ ಕಟ್ಟಡ ಕಟ್ಟಿದ ನಂತರ ಪ್ಲೈನ್ ಬೀದಿಯಲ್ಲಿ ಹಂಚಿಕೆ ಮಾಡಿರುವುದನ್ನು ಗುತ್ತಿಗೆ ಅವಧಿ ಮುಗಿದ ನಂತರ ತೆರವು ಮಾಡುವ ನಿಬಂಧನೆಯೊಂದಿಗೆ ಈ ಸಂಸ್ಥೆಗೆ ಹಂಚಿಕೆ ಮಾಡಲಾಗಿರುತ್ತದೆ.

ಮೇಲ್ಕಂಡ ಸಂಸ್ಥೆಯವರು ಗುತ್ತಿಗೆ ಕರಾರು ಪತ್ರದ ಪ್ರಕಾರ ಗುತ್ತಿಗೆ ಅವಧಿ ಪೂರ್ಣಗೊಂಡಿದ್ದರೂ ಸಹ ತೆರವು ಮಾಡಿರುವುದಿಲ್ಲ ಮತ್ತು ಜನರಲ್ ಸೆಕ್ರೆಟರಿ ಸ್ಟೇಟ್ ಟ್ಯಾಕ್ಸ್ ಪೇಯರ್ಸ್ ವೆಲ್‌ಫೇರ್ ಕೌನ್ಸಲ್ (ರಿ) ನ ಸದಸ್ಯರು ಸದರಿ ಆಸ್ತಿಯನ್ನು ನಗರ ಪಾಲಿಕೆ ವಶಕ್ಕೆ ತೆಗೆದುಕೊಂಡು ಸಂರಕ್ಷಿಸಲು ಮನವಿ ನೀಡಿರುವುದರಿಂದ ಅರ್ಜಿದಾರರ ಮನವಿಯ ಮೇರೆಗೆ ಹಾಗೂ ಈಗಾಗಲೇ ಒಂದೇ ಸಂಸ್ಥೆಗೆ ಒಂದೇ ವ್ಯಾಪ್ತಿಯಲ್ಲಿ ಎರಡು ಜಾಗಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ವಿಷಯದ ಸಂಖ್ಯೆ: 343, ದಿನಾಂಕ:27-09-2001ರಂದು ನಡೆದ ಪಾಲಿಕೆ ಸಭೆಯ ನಿರ್ಣಯದಲ್ಲಿ ಸದರಿ ಸಂಸ್ಥೆಯು ಒಂದು ಉನ್ನತ ಸಂಸ್ಥೆಯಾಗಿದ್ದು, ಸಮಾಜ ಸೇವಾ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಸದರಿ ಕಟ್ಟಡವನ್ನು 30 ವರ್ಷಗಳ ಗುತ್ತಿಗೆ ಆಧಾರದ ಮೇಲೆ ನೀಡುವುದು ಹಾಗೂ ಗುತ್ತಿಗೆ ಮೊತ್ತ 1500/- ಬದಲು ಮಾಸಿಕ 3000/-ರೂ ಗಳ ಗುತ್ತಿಗೆ ಹಣ ನಿಗದಿಪಡಿಸಿ ಗುತ್ತಿಗೆ ನೀಡಲು ಒಪ್ಪುವುದೆಂದು ತೀರ್ಮಾನಿಸಿರುತ್ತದೆ. ಈ ತೀರ್ಮಾನದ ನಿರ್ಣಯವನ್ನು ಸರ್ಕಾರದ ಅನುಮೋದನೆ ಕೋರಿ, ದಿನಾಂಕ:05-07-2002ರಂದು ಪತ್ರದ ಸಂಖ್ಯೆ:ಎ3(2)/ಪಿಆರ್/14/2002-03ರಲ್ಲಿ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ರವರನ್ನು ಕೋರಲಾಗಿತ್ತು. ತದ ನಂತರ ವಿಷಯದ ಸಂಖ್ಯೆ: 343, ದಿನಾಂಕ:27-09-2001ರಂದು ನಡೆದ ಮಹಾನಗರ ಪಾಲಿಕೆ ಸಭೆಯ ತೀರ್ಮಾನವನ್ನು ರದ್ದು ಪಡಿಸಲು ಕೋರಿ ಮಾನ್ಯ ಆಡಳಿತಗಾರರ ಮುಂದೆ ದಿನಾಂಕ: 16-12-2009ರಲ್ಲಿ ಟಿಪ್ಪಣಿ ಮಂಡಿಸಿರುತ್ತಾರೆ. ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ದಿನಾಂಕ: 08-01-2010ರ ನಡವಳಿಯ ವಿಷಯದ ಸಂಖ್ಯೆ:496/2009-10ರ ಪ್ರಸ್ತಾವನೆಯಂತೆ ಮಾನ್ಯ ಆಡಳಿತಗಾರರು ಈ ರೀತಿ ತೀರ್ಮಾನ ನೀಡಿರುತ್ತಾರೆ.

Approved as proposed . However such cases should not be dealt with in isolation, meaning that similar cases be brought up by collecting information from the subordinate offices and similar decision should be taken in such cases. ಎಂಬುದಾಗಿ ಮಾನ್ಯ ಆಡಳಿತಗಾರರು ನಿರ್ಣಯವನ್ನು ಸರ್ಕಾರದ ಅನುಮತಿ ಪಡೆಯಲು ದಿನಾಂಕ: 19-01-2010 ರಂದು ಪತ್ರದ ಸಂಖ್ಯೆ: ಎ3(2)/ಪಿಆರ್/14/2002-03 ಪತ್ರ ರವಾನಿಸಿರುತ್ತಾರೆ.

ಸದರಿ ಕಟ್ಟಡಕ್ಕೆ ದಿನಾಂಕ:15-10-1992 ರಿಂದ ಮಾರ್ಗಸೂಚಿ ದರಗಳಂತೆ ಗುತ್ತಿಗೆ ಮೊತ್ತ ಮಾಸಿಕ ರೂ.1500.00ಗಳ ಬದಲು ಮಾಸಿಕ ಗುತ್ತಿಗೆ ಮೊತ್ತ ರೂ. 3000.00 ಗಳಿಗೆ ನಿಗಧಿಪಡಿಸಲಾಗಿರುತ್ತದೆ. ದಿನಾಂಕ:12-08-2013ರಿಂದ 12-01-2014ರ ಮಾರ್ಗಸೂಚಿ ದರ ರೂ. 4000.00 ಶೇ.40% ರಷ್ಟು ಹೆಚ್ಚಿಸಿ ರೂ. 5600.00 ಹಾಗೂ ಪ್ರಸ್ತುತದಲ್ಲಿ ಮಾರ್ಗಸೂಚಿ ದರ ರೂ.49800.00 ಶೇ.40ರಷ್ಟು ಹೆಚ್ಚಿಸಿ ರೂ. 69720.00 ಗಳಾಗಿರುತ್ತದೆ.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ ವಿಕಾಸ ಸೌಧ ಬೆಂಗಳೂರು ರವರು ದಿನಾಂಕ:18-02-2012ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಪತ್ರ ಬರೆದು ದಿನಾಂಕ: 27-09-2001ರಂದು ವಿಷಯ ಸಂಖ್ಯೆ: 343ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಪಾಲಿಕೆ ಅಧಿಕಾರಗಳನ್ನು ಚಲಾಯಿಸಿ ಆಡಳಿತಾಧಿಕಾರಿಗಳು ದಿನಾಂಕ: 08-01-2010ರಂದು ವಿಷಯದ ಸಂಖ್ಯೆ: 496/2010ರಲ್ಲಿ ರದ್ದು ಪಡಿಸಿರುವ ನಿರ್ಣಯದನ್ವಯ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶಿಸಿರುತ್ತಾರೆ. ಹಾಗೂ ಸರ್ಕಾರದ ಆದೇಶ ಸಂಖ್ಯೆ:ನ.ಅ.ಇ/129/ಟಿ.ಎಂ.ಡಿ/2002 ದಿನಾಂಕ: 02-06-2003, ಪಾಲಿಕೆಯ ಸುತ್ತೋಲೆ ಸಂಖ್ಯೆ: ಎ3(4)/ಪಿ.ಆರ್/119/2012-13 ದಿನಾಂಕ: 01-07-2013ರಂತೆ ಗುತ್ತಿಗೆ ಆಧಾರದ ಮೇಲೆ ನೀಡಿರುವ ಸ್ವತ್ತುಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು, ಈ ಸಂಬಂಧ ಬೆಂಗಳೂರು ಮಹಾನಗರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರು ಪಾಲಿಕೆಗೆ ದಿನಾಂಕ: 03-06-2016ರಂದು ಮನವಿ ಸಲ್ಲಿಸಿ ಗುತ್ತಿಗೆ ಅವಧಿಯನ್ನು ಮುಂದಿನ 30 ವರ್ಷಗಳ ಕಾಲಾವಧಿಗೆ ನವೀಕರಿಸಲು ಕೋರಿರುವ ಮೇರೆಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ನಗರ ಪಾಲಿಕೆಯ ಸಭೆ ಮುಂದೆ ಮಂಡಿಸಿರುವ ***ಮಾನ್ಯ ಆಯುಕ್ತರ ದಿನಾಂಕ: 06.08.2016 ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಪ್ರಸ್ತಾಪಿತ ಸ್ವತ್ತನ್ನು ಇಂದಿರಾ ಗಾಂಧಿ ಸ್ಮಾರಕ ದತ್ತಿ ಬೆಂಗಳೂರು ಟ್ರಸ್ಟ್ ರವರಿಗೆ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಸಂಬಂಧ ಘನ ಸರ್ಕಾರದ ದಿನಾಂಕ: 01.07.2013ರ ಸುತ್ತೋಲೆಯಂತೆ ಕ್ರಮ ವಹಿಸಬೇಕಾಗಿರುವುದರಿಂದ ಸದರಿ ಗುತ್ತಿಗೆ ನವೀಕರಣ ಕುರಿತಂತೆ ಸರ್ಕಾರದ ಹಂತದಲ್ಲಿಯೇ ತೀರ್ಮಾನಿಸಲು ಪ್ರಸ್ತಾವನೆಯನ್ನು ಘನ ಸರ್ಕಾರಕ್ಕೆ ಸಲ್ಲಿಸಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ 20.08.2016ರ ಸಭೆಯ ನಿರ್ಣಯ.***

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 20.08.2016ರ ನಿರ್ಣಯ ಒಪ್ಪಲು ಸಮಿತಿಯು ತೀರ್ಮಾನಿಸಿತು.**

**(ಎಮ್. ಶಿವರಾಜು)**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**